ಕರ್ನಾಟಕ ಸರ್ಕಾರ

GOVERNMENT OF KARNATAKA

# ಜಿಲ್ಲಾ ಪಂಚಾಯತ ಕಾರ್ಯಾಲಯ ಬೆಳಗಾವಿ-590 002

ZILLA PANCHAYAT OFFICE, BELGAUM-590 002

ದೂರವಾಣಿ 0831-2407205
Telephone -2407212

ಫ್ಯಾಕ್ಸ್/Fax 0831-2429662
e-mail ceo_zp_bgm@nic.in
eobelmms@yahoo.co.in

ಸಂಖ್ಯೆ:ಜಿಪಂ:ಅದಾ:ಆಹಾರಮೆನು:2013-14

ದಿನಾಂಕ; 05-02-2014

ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕ ಪಂಚಾಯತ ----------

ವಿಷಯ: ದಿನಾಂಕ: 16-4-2013ರಂದು ನಡೆದ ಪಿ.ಎ.ಬಿ ಸಭೆಯಲ್ಲಿ ವ್ಯಕ್ತಪಡಿಸಿರುವ ಆಕ್ಷೇಪಣೆ ಬಗ್ಗೆ.
ಉಲ್ಲೇಖ: ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಪತ್ರಸಂಖ್ಯೆ ಎಂ6:ಅದಾ/ಅ.ಸಿ.ತ./36/13-14 ದಿನಾಂಕ:28-1-14

**

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಧ್ಯಾಹ್ನ ಬಿಸಿಊಟ ಕಾರ್ಯಕ್ರಮದಡಿ ಸೌಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಮಕ್ಕಳಿಗೆ ಬಿಸಿಊಟ ನೀಡುತ್ತಿದ್ದು, ಸ್ವಯಂ ಸೇವಾ ಸಂಸ್ಥೆಗಳಿಂದ ಬಿಸಿಊಟ ಪಡೆಯುತ್ತಿರುವ ಶಾಲೆಗಳಲ್ಲಿ ಕೇಂದ್ರ ಸರ್ಕಾರವು ನಿಗಧಿಪಡಿಸಿರುವಂತೆ ಆಹಾರಧಾನ್ಯಗಳ ಬಳಕೆಯಾಗದೇ ಇರುವುದು ಮತ್ತು ಮಕ್ಕಳು ಸಹ ಕಡಿಮೆ ಊಟ ಸೇವನೆ ಮಾಢುತ್ತಿರುವುದನ್ನು ಕೇಂದ್ರ ಸರ್ಕಾರವು ಆಕ್ಷೇಪಿಸಿ ಬೆಂಗಳೂರು ನಗರ ಮತ್ತು ಧಾರವಾಡ ಜಿಲ್ಲೆಗಳನ್ನು Special Focus District (Poor utilization of food grains and Low coverage of children) ಎಂದು ಗುರುತಿಸಿರುತ್ತದೆ.

ಈ ಬಗ್ಗೆ ಜಿಲ್ಲೆಯಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯ ಕಾರ್ಯಕ್ರಮದ ಅನುಷ್ಠಾನಕ್ಕೆ ಕೈಜೋಡಿಸಿರುವ ಸ್ವಯಂ ಸೇವಾ ಸಂಸ್ಥೆಗಳು ಶಾಲೆಗಳಿಗೆ ಪ್ರತಿ ದಿನ ಒಂದೇ ರೀತಿಯ ಆಹಾರವನ್ನು ಸರಬರಾಜು ಮಾಡುತ್ತಿರುವ ಬಗ್ಗೆ, ಒಂದೇ ರೀತಿಯ ತರಕಾರಿ ಬಳಸುತ್ತಿರುವುದನ್ನು ಮತ್ತು ಸ್ಥಳೀಯ ಆಹಾರ ಪದ್ದತಿಯನ್ವಯ ಆಹಾರ ಸಾಮಗ್ರಿಗಳನ್ನು ಬಳಕೆ ಮಾಡದೇ ಸಂಸ್ಥೆಯ ಆಹಾರ ಪದ್ದತಿಯನ್ನು ಅನುಸರಿಸಿ ಮಕ್ಕಳಿಗೆ ಬಿಸಿಊಟ ಸಿದ್ದಪಡಿಸಿ ಸರಬರಾಜು ಮಾಡುತ್ತಿದ್ದು ಇದರಿಂದ ಮಕ್ಕಳು ಇಷ್ಟಪಟ್ಟು ಆಹಾರವನ್ನು ಸೇವಿಸದೇ ಇರುವುದನ್ನೂ ಸಹ ಮೇಲ್ವಿಚಾರಣಾ ಸಂಸ್ಥೆಗಳವರು ಆಕ್ಷೇಪಿಸಿರುತ್ತಾರೆ.

ಅಲ್ಲದೆ ಶಾಲಾ ಭೇಟಿ ಸಂದರ್ಭಗಳಲ್ಲಿ ಮಕ್ಕಳ ಅಭಿಪ್ರಾಯವೂ ಸಹ ಇದಕ್ಕೆ ಪೂರಕವಾಗಿರುತ್ತದೆ. ಈ ಸಮಸ್ಯಯನ್ನು ಬಗೆಹರಿಸುವ ಹಿನ್ನಲೆಯಲ್ಲಿ ಕೆಳಕಂಡಂತೆ ವಾರದ ಆಹಾರದ ಮೆನುವನ್ನು ಶಾಲಾ ಹಂತದಲ್ಲಿ ಮತ್ತು ಎಲ್ಲಾ ಸ್ವಯಂ ಸೇವಾ ಸಂಸ್ಥೆಗಳು ಸಹ ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ.

<table>
<tr><th>ವಾರ/ದಿನ</th><th>ನಿಗಧಿಪಡಿಸಿರುವ ಆಹಾರದ ವಿವರ</th><th>ಸಾಂಬಾರಿಗೆ ಬಳಸಬೇಕಾದ ತರಕಾರಿ</th><th>ಷರಾ</th></tr>
<tr><td>ಸೋಮವಾರ</td><td>ಅನ್ನ-ಸಾಂಬಾರು</td><td>ಪಾಲಕ್, ನುಗ್ಗೆ ಸೊಪ್ಪು, ಅಥವಾ ಇತರೆ ಸೊಪ್ಪು ಆಲೂಗಡ್ಡೆ, ಬದನೇಕಾಯಿ, ಈರುಳ್ಳಿ, ಟೋಮೆಟೋ ಇತರೆ ತರಕಾರಿಗಳು</td><td rowspan="6">ಬೇಳೆ ಮತ್ತು ಕಾಳುಗಳನ್ನು ಕಡ್ಡಾಯಗೊಳಿಸಿದೆ.<br>ಈ ತರಕಾರಿಗಳೊಂದಿಗೆ ಸ್ಥಳೀಯ ಆಹಾರ ಪದ್ದತಿಯನ್ವಯ ಸ್ಥಳೀಯವಾಗಿ ಬೆಳೆಯುವ ಇತರೆ ತರಕಾರಿ/ಗೆಡ್ಡ/ಗೆಣಸು/ಸೊಪ್ಪುಗಳನ್ನು ಬಳಸುವುದು ಸ್ಥಳೀಯ ಆಹಾರ ಪದ್ದತಿಯನ್ವಯವೇ ತರಕಾರಿಗಳನ್ನು ಮತ್ತು ಸಾಂಬಾರು ಪದಾರ್ಥಗಳನ್ನು ಹೊಂದಾಣೀಕೆ ಮಾಡಿಕೊಂಡು ಆಹಾರ ಸಿದ್ದಪಡಿಸುವುದು<br>ಸಿದ್ದಪಡಿಸಿದ ಸಾಂಬಾರು ಪದಾರ್ಥ/ಪುಡಿಗಳನ್ನು ಅಗ್ ಮಾರ್ಕ ಮುದ್ರೆ/ ಪ್ರಮಾಣ ಪತ್ರ ಹೊಂದಿರುವ ತಯಾರಕರಿಂದ ತಯಾರಿಸಿದ ಪದಾರ್ಥಗಳನ್ನು ಮಾತ್ರ ಬಳಸುವುದು ಅಥವಾ ಉತ್ತಮ ಸಾಗ್ರಿಗಳನ್ನು ಬಳಸಿ ಸ್ವತಃ ತಯಾರಿಸಿ ಬಳಸುವುದು.<br>ಸ್ಥಳೀಯ ಹವಮಾನ/ ವಾತಾವರಣಕ್ಕೆ ಅನುಗುಣವಾಗಿ ತರಕಾರಿ ಮತ್ತು ಸಾಂಬಾರು ಪದಾರ್ಥಗಳನ್ನು ಬಳಸುವುದು</td></tr>
<tr><td>ಮಂಗಳವಾರ</td><td>ಅನ್ನ-ಸಾಂಬಾರು</td><td>ಬೂದು ಕುಂಬಳ, ಕ್ಯಾರೆಟ್, ಬೀನ್ಸ್, ಎಲೆಕೋಸು, ಬೀಟರೂಟ್, ಆಲೂಗಡ್ಡೆ, ಈರುಳ್ಳಿ, ಟೊಮೆಟೋ ಇತರೆ ತರಕಾರಿಗಳು</td></tr>
<tr><td>ಬುಧವಾರ</td><td>ಅನ್ನ-ಸಾಂಬಾರು</td><td>ನುಗ್ಗೆಕಾಯಿ. ಬೀನ್ಸ್, ಆಲೂಗಡ್ಡೆ, ಈರುಳ್ಳಿ ಟೊಮೆಟೋ ಇತರೆ</td></tr>
<tr><td>ಗುರುವಾರ</td><td>ಅನ್ನ-ಸಾಂಬಾರು</td><td>ಕುಂಬಳಕಾಯಿ, ಸೋರೆಕಾಯಿ, ಸಾಂಬಾರು ಸೌತೆ, ಬೆಂಡೇಕಾಯಿ, ಈರೇಕಾಯಿ, ಮೂಲಂಗಿ ಇತರೆ ತರಕಾರಿಗಳು</td></tr>
<tr><td>ಶುಕ್ರವಾರ/ ಭಾನುವಾರ</td><td>ಬಿಸಿಬೇಳೆ ಬಾತ್</td><td>ಬೀನ್ಸ್, ಗೆಡ್ಡೆಕೋಸು, ಕ್ಯಾರೆಟ್, ಕ್ಯಾಪ್ಸಿಕಮ್ ಈರುಳ್ಳಿ, ಟೊಮೆಟೋ ಇತರೆ ತರಕಾರಿ ಮತ್ತು ದ್ವಿದಳಧಾನ್ಯಗಳು</td></tr>
<tr><td>ಶನಿವಾರ</td><td>ಗೋಧಿ ಉತ್ಪನ್ನಗಳಿಂದ ತಯಾರಿಸಿದ ಆಹಾರ</td><td>ಈರುಳ್ಳಿ, ಬೀನ್ಸ್, ಕ್ಯಾರೆಟ್, ಎಲೆಕೋಸು, ಸಬ್ಬಕ್ಷಿ ಸೊಪ್ಪು ಮತ್ತು ಇತರೆ ದ್ವಿದಳ ಧಾನ್ಯಗಳು</td></tr>
</table>

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

**ಪ್ರತಿಯನ್ನು ಸೂಕ್ತಕ್ರಮಕ್ಕಾಗಿ**

1) ಉಪನಿರ್ದೇಶಕರು, ಸಾ.ಶಿ.ಇಲಾಖೆ, ಬೆಳಗಾವಿ ಮತ್ತು ಚಿಕ್ಕೋಡಿ
2) ಜಿಲ್ಲೆಯ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ, ಇವರ ಮೂಲಕ ಸಿ.ಆರ್.ಪಿಗಳಿಗೆ ಸುತ್ತೋಲೆಯನ್ನು ಹೊರಡಿಸಿ ಪ್ರತಿ ಶಾಲೆಗೆ ಆದೇಶದ ಪ್ರತಿಯನ್ನು ಕಳುಹಿಸಿ ಸ್ವೀಕೃತಿ ಪಡೆಯಲು ಸೂಚಿಸಿದೆ.
3) ಜಿಲ್ಲೆಯ ಎಲ್ಲಾ ಸಹಾಯಕ ನಿರ್ದೇಶಕರು (ಮ.ಉ.ಯೋ) ತಾಲೂಕ ಪಂಚಾಯತ ಇವರ ಮೂಲಕ ಶಾಲೆಗಳು/ ಎನ್.ಜಿ.ಓ/ ಸ್ವಸಹಾಯ ಸಂಗಳಿಗೆ ಕ್ರಮಜರುಗಿಸಿ ವರದಿ ನೀಡಲು ಸೂಚಿಸಿದೆ.

ಕರ್ನಾಟಕ ಸರ್ಕಾರ
GOVERNMENT OF KARNATAKA
ಜಿಲ್ಲಾ ಪಂಚಾಯತ ಕಾರ್ಯಾಲಯ ಬೆಳಗಾವಿ-590 002
ZILLA PANCHAYAT OFFICE, BELGAUM-590 002

ದೂರವಾಣಿ 0831-2407205
Telephone -2407212

ಫ್ಯಾಕ್ಸ್/Fax 0831-2429662
e-mail ceo_zp_bgm@nic.in
eobelmms@yahoo.co.in

ಜಿಪಂ:ಅದಾ:ಬ್ರಾಂ.ಕ್ವಾ.ಬೇ.ಗು.ಉ:2013-14

ದಿನಾಂಕ: 05-02-2014.

ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕ ಪಂಚಾಯತ -----------

ವಿಷಯ: ಶಾಲೆಗಳಿಗೆ ಬ್ರಾಂಡೆಡ್ ಕ್ವಾಲಿಟಿ ಬೇಳೆ ಮತ್ತು ಅಗ್‌ಮಾರ್ಕ ಗುಣಮಟ್ಟದ ಉತ್ಪನ್ನಗಳನ್ನು ಖರೀದಿಸಿ ಮಧ್ಯಾಹ್ನ ಉಪಹಾರ ಯೋಜನೆಯಡಿಯಲ್ಲಿ ಬಳಸುವ ಬಗ್ಗೆ.

ಉಲ್ಲೇಖ: 1) ದಿನಾಂಕ: 16-12-2013ರಂದು ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಚಾಲನ ಮತ್ತು ಪರಾಮರ್ಶ ಸಮಿತಿಯ ನಡಾವಳಿಗಳು

2) ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ರವರ ಪತ್ರಸಂಖ್ಯೆ:ಎಂ2/ ಅದಾ/ ರಾಚಾಪ.ಸ.ಸಭೆ/36/13-14 ದಿನಾಂಕ: 28-1-2014

**

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಧ್ಯಾಹ್ನ ಉಪಹಾರ ಯೋಜನೆಯಡಿ ಆಹಾರ ತಯಾರಿಕೆಯಲ್ಲಿ ಬಳಸುವ ಎಲ್ಲ ಉತ್ಪನ್ನಗಳು ಬ್ರಾಂಡೆಡ್ ಹೊಂದಿರಬೇಕಲ್ಲದೆ ಅಗ್‌ಮಾರ್ಕ ಗುಣಮಟ್ಟವನ್ನು ಹೊಂದಿರಬೇಕೆಂಬುದನ್ನು ಕಡ್ಡಾಯ ಮಾಡಿರುತ್ತಾರೆ. ಈ ಮೇರೆಗೆ ಶಾಲೆಗಳಿಗೆ ಪ್ರತಿ ದಿನ ಆಹಾರ ತಯಾರಿಸಲು ಬಳಸುವ ಉತ್ಪನ್ನಗಳ ಮೇಲೆ ಹೇಳಿದಂತೆ ಬ್ರಾಂಡೆಡ್ ಮತ್ತು ಅಗ್‌ಮಾರ್ಕ ಗುಣಮಟ್ಟ ಹೊಂದಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಉಲ್ಲೇಖಿತ ಪತ್ರ 2ರನ್ವಯ ಮಾನ್ಯ ಆಯುಕ್ತರು ತಿಳಿಸಿರುತ್ತಾರೆ. ಇದನ್ನು, ಎನ್.ಜಿ.ಓಗಳು ಖರೀದಿಸುವ ಉತ್ಪನ್ನಗಳಿಗೂ ಸಹ ಕಡ್ಡಾಯಗೊಳಿಸಲಾಗಿದೆ.

ಈ ಬಗ್ಗೆ ತಮ್ಮ ವ್ಯಾಪ್ತಿಯ ಶಾಲೆಗಳಿಗೆ, ಎನ್.ಜಿ.ಓಗಳಿಗೆ ಹಾಗೂ ಆಹಾರ ಸರಬರಾಜು ಮಾಡುವ ಏಜನ್ಸಿಗಳಿಗೆ ಸೂಕ್ತ ನಿರ್ದೇಶನ ನೀಡುವುದಲ್ಲದೆ ಕಾಲಕಾಲಕ್ಕೆ ಪರಿಶೀಲಿಸಿ ದೃಢೀಕರಿಸಿಕೊಳ್ಳಲು ಸೂಚಿಸಿದೆ.

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತಕ್ರಮಕ್ಕಾಗಿ

1) ಉಪನಿರ್ದೇಶಕರು, ಸಾ.ಶಿ.ಇಲಾಖೆ, ಬೆಳಗಾವಿ/ಚಿಕ್ಕೋಡಿ
2) ಜಿಲ್ಲೆಯ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾ.ಸಿ.ಇಲಾಖೆ,-----------
3) ಜಿಲ್ಲಾ ವ್ಯವಸ್ಥಾಪಕರು, ಕೆ.ಎಫ್.ಸಿ.ಎಸ್.ಸಿ ಬೆಳಗಾವಿ
4) ಸಹಾಯಕ ನಿರ್ದೇಶಕರು (ಮ.ಉ.ಯೋ) ತಾ.ಪಂ -------------
5) ಜಿಲ್ಲೆಯ ಎಲ್ಲಾ ಸರ್ಕಾರೇತರ ಸಂಸ್ಥೆಗಳು ------------------
6) ಜಿಲ್ಲೆಯ ಎಲ್ಲಾ ಮಹಿಳಾ ಸ್ವಸಹಾಯ ಸಂಘಗಳು-------------

ಕರ್ನಾಟಕ ಸರ್ಕಾರ
GOVERNMENT OF KARNATAKA
ಜಿಲ್ಲಾ ಪಂಚಾಯತ ಕಾರ್ಯಾಲಯ ಬೆಳಗಾವಿ-590 002
ZILLA PANCHAYAT OFFICE, BELGAUM-590 002

ದೂರವಾಣಿ 0831-2407205
Telephone -2407212

ಫ್ಯಾಕ್ಸ್/Fax 0831-2429662
e-mail ceo_zp_bgm@nic.in
eobelmms@yahoo.co.in

ಜಿಪಂ:ಅದಾ:ಅ.ಸಿ.ತ:2013–14

ದಿನಾಂಕ: 06–02–2014

ಉಪನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಳಗಾವಿ ಮತ್ತು ಚಿಕ್ಕೋಡಿ

ವಿಷಯ: ಮುಖ್ಯಅಡುಗೆಯವರಿಗೆ ಹಾಗೂ ಮುಖ್ಯಶಿಕ್ಷಕರಿಗೆ ಮಧ್ಯಾಹ್ನ ಉಪಹಾರ ಯೋಜನೆಯಡಿ ತರಬೇತಿ ನೀಡುವ ಬಗ್ಗೆ.

ಉಲ್ಲೇಖ: ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ರವರ ಪತ್ರಸಂಖ್ಯೆ: ಎಂ6:ಅದಾ/ಅ.ಸಿ.ತ./36/13–14 ದಿನಾಂಕ: 28–1–2014.

**

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ ಮಧ್ಯಾಹ್ನ ಉಪಹಾರ ಯೋಜನೆಯಡಿ ವಿವಿಧ ಹಂತಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಾನವ ಸಂಪನ್ಮೂಲವನ್ನು ಬಲಪಡಿಸಬೇಕಾಗಿದೆ. ಈ ಉದ್ದೇಶಕ್ಕಾಗಿ ರಾಜ್ಯಮಟ್ಟದಲ್ಲಿ ಅಡುಗೆಯವರಿಗೆ ಹೋಟೆಲ್ ಮ್ಯಾನೇಜಮೆಂಟ್ ಮತ್ತು ಎನ್.ಜಿ.ಓಗಳ ವತಿಯಿಂದ 10 ದಿನಗಳ ತರಬೇತಿ ನೀಡಲು ಆರಂಭಿಸಲಾಗಿದೆ.

ಜಿಲ್ಲೆಗಳಲ್ಲಿ ಈಗಾಗಲೇ ಒಂದು ದಿನದ ತರಬೇತಿಯನ್ನು ರಾಜ್ಯಾದ್ಯಂತ ಎಲ್ಲಾ ಅಡುಗೆ ಸಹಾಯಕರಿಗೆ ನೀಡಲಾಗಿದೆ. ಇದಲ್ಲದೆ ಮಧ್ಯಾಹ್ನ ಉಪಹಾರ ಯೋಜನೆಯಡಿಯಲ್ಲಿ ಶಾಲೆಯ ಮುಖ್ಯಶಿಕ್ಷಕರು ಹಾಗೂ ಮುಖ್ಯ ಅಡುಗೆಯವರು ನಿರ್ವಹಿಸಬೇಕಾದ ಜವಾಬ್ದಾರಿ ಕುರಿತಂತೆ ಪೌಷ್ಟಿಕತೆ ಶಿಕ್ಷಣವನ್ನು ಮುಖ್ಯಶಿಕ್ಷಕರು ಹಾಗೂ ಮುಖ್ಯ ಅಡುಗೆಯವರು ಪಡೆದಲ್ಲಿ ಮಧ್ಯಾಹ್ನ ಉಪಹಾರ ಯೋಜನೆ ಉತ್ಕೃಷ್ಟವಾಗಲು ಸಹಾಯವಾಗುತ್ತದೆ.

ಈ ನಿಟ್ಟಿನಲ್ಲಿ ರಾಷ್ಟ್ರಾದ್ಯಂತ ಆಹಾರ ಮತ್ತು ಪೌಷ್ಟಿಕ ಬೋರ್ಡ (Food and Nutrition Board) 43 ಘಟಕಗಳನ್ನು ಹೊಂದಿದ್ದು, ಈ ಘಟಕಗಳಿಂದ ಮುಖ್ಯಶಿಕ್ಷಕರಿಗೆ ಪೌಷ್ಠಿಕಾಂಶ ಕುರಿತಂತೆ ಕಳೆದ 10 ವರ್ಷಗಳಿಂದ ಶಿಕ್ಷಣ ನೀಡುತ್ತಿದೆ.

ಈ ಘಟಗಳನ್ನು ಬಳಸಿಕೊಂಡು ಜಿಲ್ಲೆಯಲ್ಲಿ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ/ಪ್ರೌಢಶಾಲೆಗಳ ಮುಖ್ಯಶಿಕ್ಷಕರುಗಳಿಗೆ ಹಾಗೂ ಆಯಾ ಶಾಲೆಗಳ ಮುಖ್ಯ ಅಡುಗೆಯವರಿಗೆ ತರಬೇತಿಯನ್ನು ನಮ್ಮ ಜಿಲ್ಲೆಯ ಆಹಾರ ಮತ್ತು ಪೌಷ್ಠಿಕಾಂಶ ಬೋರ್ಡ (Food and Nutrition Board) ವ್ಯಾಕ್ಸಿನ್ ಡಿಪೋ ಬೆಳಗಾವಿ ಈ ಸಂಸ್ಥೆಯಿಂದ ವ್ಯವಸ್ಥೆ ಮಾಡಲು ಸೂಚಿಸಿದೆ. ಮತ್ತು ಕೈಗೊಂಡ ಕ್ರಮದ ಬಗ್ಗೆ ಈ ಕಛೇರಿಗೆ ವರದಿ ಸಲ್ಲಿಸುವುದು.

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

**ಪ್ರತಿಯನ್ನು ಸೂಕ್ತಕ್ರಮಕ್ಕಾಗಿ**

1) ಜಿಲ್ಲಾ ಅಂಕಿತ ಅಧಿಕಾರಿಗಳು ವ್ಯಾಕ್ಸಿನ ಡಿಪೋ ಬೆಳಗಾವಿ
2) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ----------
3) ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ, ---------------
4) ಸಹಾಯಕ ನಿರ್ದೇಶಕರು (ಮ.ಉ.ಯೋ) ತಾಲೂಕ ಪಂಚಾಯತ ---------

ಕರ್ನಾಟಕ ಸರ್ಕಾರ
GOVERNMENT OF KARNATAKA
ಜಿಲ್ಲಾ ಪಂಚಾಯತ ಕಾರ್ಯಾಲಯ ಬೆಳಗಾವಿ-590 002
ZILLA PANCHAYAT OFFICE, BELGAUM-590 002

ದೂರವಾಣಿ 0831-2407205
Telephone -2407212

ಫ್ಯಾಕ್ಸ್/Fax 0831-2429662
e-mail ceo_zp_bgm@nic.in
eobelmms@yahoo.co.in

ಜಿಪಂ:ಅದಾ:ಆಹಾರಗುಣಮಟ್ಟ:2013-14

ದಿನಾಂಕ: 06-02-2014.

ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕ ಪಂಚಾಯತ ----------

ವಿಷಯ: ಸಿದ್ದಪಡಿಸಿದ ಆಹಾರದ ಗುಣಮಟ್ಟವನ್ನು ಸರ್ಕಾರಿ ಪ್ರಯೋಗಾಲಯಗಳಲ್ಲಿ ಪರೀಕ್ಷಿಸುವ ಬಗ್ಗೆ

ಉಲ್ಲೇಖ: 1) ದಿನಾಂಕ: 16-12-2013ರಂದು ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಚಾಲನ ಮತ್ತು ಪರಾಮರ್ಶ ಸಮಿತಿಯ ನಡಾವಳಿಗಳು
2) ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ರವರ ಪತ್ರಸಂಖ್ಯೆ:ಎಂ2/ಅದಾ/ರಾಚಾಪ.ಸ.ಸಭೆ/36/13-14 ದಿನಾಂಕ: 28-1-2014
3) 28-10-2013 ಆಹಾರಧಾನ್ಯಗಳ ಗುಣಮಟ್ಟ ಪರಿಶೀಲನಾ ಸಭೆಯ ವಿಷಯ

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಧ್ಯಾಹ್ನ ಉಪಹಾರ ಯೋಜನೆಯಡಿ ತಯಾರಾಗುವ ಬಿಸಿಊಟದ ಗುಣಮಟ್ಟವನ್ನು ಹಾಗೂ ಅದು ಹೊಂದಿರಬೇಕಾದ ಅಗತ್ಯಯ ಪೌಷ್ಟಿಕಾಂಶಗಳನ್ನು ಕಾಲಕಾಲಕ್ಕೆ ಪರಿಶೀಲಿಸುವಂತೆ ದಿನಾಂಕ: 16-12-2013ರಂದು ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಚಾಲನಾ ಮತ್ತು ಪರಾಮರ್ಶ ಸಮಿತಿಯ ನಡಾವಳಿಯಲ್ಲಿ ಸೂಚಿಸಲಾಗಿದೆ. ಅಲ್ಲದೇ ರಾಷ್ಟ್ರಾದ್ಯಂತ ಈ ಕೆಳಕಂಡ ಸರ್ಕಾರಿ ಪ್ರಯೋಗಾಲಯಗಳಿದ್ದು, ಅವುಗಳ ಮೂಲಕ ಶಾಲೆಗಳಲ್ಲಿ ತಯಾರಾಗುವ ಸಿದ್ದಪಡಿಸಿದ ಆಹಾರದ ಗುಣಮಟ್ಟವನ್ನು ಕಾಲಕಾಲಕ್ಕೆ ಪರಿಶೀಲಿಸಿ, ಶಾಲೆಗಳಲ್ಲಿ ಪ್ರಮಾಣ ಪತ್ರವನ್ನು ನಿರ್ವಹಿಸಲು ಸೂಚಿಸಿದೆ.

**ಸರ್ಕಾರಿ ಸಿದ್ದಪಡಿಸಿದ ಆಹಾರ ಪರೀಕ್ಷಾ ಪ್ರಯೋಗಾಲಯಗಳ ಪಟ್ಟಿ**

1. ಸಿ.ಎಸ್.ಐ.ಆರ್.
2. ಎನ್.ಎ.ಬಿ.ಎಲ್
3. ಎಫ್.ಎಸ್.ಎಸ್.ಎ.ಐ
4. Food and Nutrition Board Units

ನಮ್ಮ ಜಿಲ್ಲೆಯಲ್ಲಿ Food and Nutrition Board Units ಸಂಸ್ಥೆಯ ವ್ಯಾಕ್ಸಿನ್ ಡಿಪೋ ಟಿಳಕವಾಡಿ, ಬೆಳಗಾವಿ ಇಲ್ಲಿ ಸಂಪರ್ಕಿಸಿವುದು ದೂರವಾಣಿ ಸಂಖ್ಯೆ: 9036000711

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ಪ್ರತಿಯನ್ನು ಮಾಹಿತಿಗಾಗಿ
1) ಉಪನಿರ್ದೇಶಕರು, ಸಾ.ಶಿ.ಇಲಾಖೆ, ಬೆಳಗಾವಿ ಮತ್ತು ಚಿಕ್ಕೋಡಿ
2) ಜಿಲ್ಲೆಯ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ, ------------
3) ಜಿಲ್ಲೆಯ ಎಲ್ಲಾ ಸಹಾಯಕ ನಿರ್ದೇಶಕರು (ಮ.ಉ.ಯೋ) ತಾ.ಪಂ ---------- ಇವರಿಗೆ ಸೂಕ್ತಕ್ರಮಕ್ಕಾಗಿ

ಕರ್ನಾಟಕ ಸರ್ಕಾರ
GOVERNMENT OF KARNATAKA
ಜಿಲ್ಲಾ ಪಂಚಾಯತ ಕಾರ್ಯಾಲಯ ಬೆಳಗಾವಿ-590 002
ZILLA PANCHAYAT OFFICE, BELGAUM-590 002

ದೂರವಾಣಿ 0831-2407205
Telephone -2407212

ಫ್ಯಾಕ್ಸ್/Fax 0831-2429662
e-mail ceo_zp_bgm@nic.in
eobelmms@yahoo.co.in

ಸಂಖ್ಯೆ:ಜಿಪಂಅದಾ:ಪತ್ರಿಕಾಪ್ರಕಟಣೆ:2013-14

ದಿನಾಂಕ: 06-02-2014

**ಕಾರ್ಯನಿರ್ವಾಹಕ ಅಧಿಕಾರಿಗಳು,**
**ತಾಲೂಕ ಪಂಚಾಯತ ___________**

ವಿಷಯ: ಪತ್ರಿಕೆಗಳಲ್ಲಿ ಪ್ರಕಟಗೊಂಡ ವಿಷಯಗಳ ಬಗ್ಗೆ ಸ್ಪಷ್ಟೀಕರಣ ನೀಡುವ ಕುರಿತು

ಉಲ್ಲೇಖ: 1) ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಗೊಂಡ ವರದಿಗಳು

**

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಕಳೆದ 15 ದಿನಗಳಿಂದ ಕೆಲವು ದಿನಪತ್ರಿಕೆಗಳಲ್ಲಿ ನಮ್ಮ ಜಿಲ್ಲೆಯ ಮಧ್ಯಾಹ್ನ ಉಪಹಾರ ಯೋಜನೆಯ ಕಾರ್ಯಕ್ರಮದ ಬಗ್ಗೆ ಆಹಾರಧಾನ್ಯಗಳ ಗುಣಮಟ್ಟ ಮತ್ತು ತೂಕದ ಬಗ್ಗೆ ವರದಿಗಳು ಬಂದಿರುತ್ತವೆ.

ಅವುಗಳಲ್ಲಿ ಆಹಾರಧಾನ್ಯಗಳಲ್ಲಿ ನುಸಿ ಇದ್ದ ಬಗ್ಗೆ ಹಾಗೂ ಕಸ ಕಡ್ಡಿ ಇರುವ ಬಗ್ಗೆ ಹಾಗೂ ಸರಬರಾಜು ಆಗಿರುವ ಆಹಾರಧಾನ್ಯಗಳ ತೂಕದಲ್ಲಿ ಕಡಿಮೆ ಪ್ರಮಾಣದಲ್ಲಿ ಸರಬರಾಜು ಆಗಿರುವ ಹಾಗೂ ಕೆಲವೊಂದು ಶಾಲೆಗಳಲ್ಲಿ ಬಿಸಿಊಟ ನೀಡದಿರುವ ಬಗ್ಗೆ ವಿಷಯ ಪ್ರಕಟಗೊಂಡಿರುತ್ತದೆ.

ಈ ಕುರಿತು ನಿಮ್ಮ ತಾಲೂಕಿನ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಹಾಯಕ ನಿರ್ದೇಶಕರು (ಮ.ಉ.ಯೋ), ಮತ್ತು ಸಿ.ಆರ್.ಪಿರವರುಗಳು ತಮ್ಮ ವ್ಯಾಪ್ತಿಗಳ ಶಾಲೆಗಳಿಗೆ ಭೇಟಿ ನೀಡಿ ಶಾಲೆಗಳಿಗೆ ಪೂರೈಕೆಯಾದ ಅಕ್ಕಿ, ಗೋದಿ, ಬೇಳೆ , ಎಣ್ಣೆ ಉಪ್ಪು ಹಾಗೂ ಹಾಲಿನ ಪುಡಿ ಇತ್ಯಾದಿಗಳನ್ನು ಪರಿಶೀಲಿಸಬೇಕು. ಶಾಲೆಯಲ್ಲಿ ತಾವು ಭೇಟಿ ನೀಡಿದಾಗ ಈ ಎಲ್ಲಾ ಆಹಾರಧಾನ್ಯಗಳ ದಾಸ್ತಾನುಗಳ ವಿವರಗಳನ್ನು ಹಾಗೂ ಗುಣಮಟ್ಟ ಬಗ್ಗೆ ಶಾಲಾ ಮುಖ್ಯಶಿಕ್ಷಕರಿಂದ ಲಿಖಿತ ವರದಿಯನ್ನು ಪಡೆಯಬೇಕು. ಸದರಿ ವರದಿಯಲ್ಲಿ ಶಾಲೆಯಲ್ಲಿ ಉಪಯೋಗಕ್ಕೆ ಮತ್ತು ಉಪಯೋಗಕ್ಕೆ ಬಾರದೆ ಇರುವಂತಹ ಆಹಾರಧಾನ್ಯಗಳ ದಾಸ್ತಾನು ವಿವರಣೆಯನ್ನು ವರದಿಯಲ್ಲಿ ಪಡೆಯಬೇಕು. ಸದರಿ ವರದಿಗೆ ಶಾಲಾ ಮುಖ್ಯಶಿಕ್ಷಕರು, ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ಮುಖ್ಯಅಡುಗೆಯವರ ಜಂಟಿಯಾಗಿ ದೃಢೀಕರಿಸಬೇಕು.

ಸದರಿ ಶಾಲಾವಾರು ಆಹಾರಧಾನ್ಯಗಳ ಗುಣಮಟ್ಟ, ತೂಕದ ಬಗ್ಗೆ ಹಾಗೂ ಇತ್ಯಾದಿಗಳ ಬಗ್ಗೆ ಬಂದ ವರದಿಗಳನ್ನು ಸಿ.ಆರ್.ಸಿ ಹಂತದಲ್ಲಿ ಶಾಲಾವಾರು ನಂಬರದೊಂದಿಗೆ ಶಾಲೆಗಳಲ್ಲಿ ಕಂಡುಬಂದತಹ ತೊಂದರೆ, ಹಾಗೂ ನ್ಯೂನತೆಗಳ ಪಟ್ಟಿಯನ್ನು ಮಾಡಬೇಕು. ಸಿ.ಆರ್.ಪಿಯವರು ಈ ಕುರಿತು ಶಾಲಾವಾರು ನಿಗಾವಹಿಸಿ ಪರಿಹಾರ ಕ್ರಮಗಳನ್ನು ಸೂಚಿಸಬೇಕು. ಮತ್ತು ತಮ್ಮ ಕ್ರೂಢೀಕೃತ ವರದಿಗಳನ್ನು ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು, ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು (ಮ.ಉ.ಯೋ) ಇವರಿಗೆ ದಿನಾಂಕ: 11-2-2014ರಂರೊಳಗೆ ಸಲ್ಲಿಸಬೇಕು.

ಸದರಿ ಸಿ.ಆರ್.ಸಿಯವರಿಂದ ಬಂದ ವರದಿಗಳನ್ನು ಸಹಾಯಕ ನಿರ್ದೇಶಕರುಗಳು, (ಮ.ಉ.ಯೋ) ಇವರು ಕಾರ್ಯನಿರ್ವಾಹಕ ಅಧಿಕಾರಿಗಳ ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳ ಗಮನಕ್ಕೆ ತಂದು ನಿಮ್ಮ ಹಂತದಲ್ಲಿ ಸರಿಪಡಿಸಬಹುದಾದ ತೊಂದರೆ ಮತ್ತು ನ್ಯೂನತೆಗಳನ್ನು ತಕ್ಷಣ ಪರಿಹರಿಸಬೇಕು. ಜಟಿಲವಾದ ಸಮಸ್ಯೆಗಳಿದ್ದಲ್ಲಿ ತಾಲೂಕಿನ ಸಹಾಯಕ ನಿರ್ದೇಶಕರು (ಮ.ಉ.ಯೋ) ರವರು ಈ ಕಛೇರಿಗೆ ಸೂಕ್ತಕ್ರಮಕ್ಕೆ ತುರ್ತಾಗಿ ವರದಿ ಸಲ್ಲಿಸಬೇಕು. ಶಾಲಾವಾರು, ಸಿ.ಆರ್.ಸಿವಾರು ಹಾಗೂ ತಾಲೂಕವಾರು ಕ್ರೂಢೀಕೃತ ವರದಿಯನ್ನು ಸಾಫ್ಟ್ ಮತ್ತು ಹಾರ್ಡ ಪ್ರತಿಯಲ್ಲಿ ಖುದ್ದಾಗಿ ಸಹಾಯಕ ನಿರ್ದೇಶಕರು (ಮ.ಉ.ಯೋ) ದಿನಾಂಕ: 12-2-2014ರಂದು ಈ ಕಛೇರಿಗೆ ಸಲ್ಲಿಸಬೇಕು. ಕೆ.ಎಫ್.ಸಿ.ಎಸ್.ಸಿ ಮತ್ತು ಕ.ಎಂ.ಎಫ್ ಸಂಸ್ಥೆಗಳಿಂದ ನೀವು ನೀರಿಕ್ಷಿಸುವ ಸುಧಾರಣಾ ಅಂಶಗಳನ್ನು ಸ್ಪಷ್ಟವಾಗಿ ಬರೆದು ಸಲ್ಲಿಸಬೇಕು. ಹಾಗೂ ಸಲ್ಲಿಸುವಾಗ ನೀಮ್ಮ ಹಂತದಲ್ಲಿ ಕೈಗೊಂಡ ಪರಿಹಾರದ ಕ್ರಮಗಳನ್ನು ಕೂಡಾ ವಿವರಿಸಬೇಕು.

ಪ್ರತಿ ದಿನ ಸಿ.ಆರ್.ಪಿಯವರು ತಮ್ಮ ವ್ಯಾಪ್ತಿಯ ಶಾಲೆಗಳಲ್ಲಿ ಈ ಕುರಿತು ನಿಗಾವಹಿಸಿ ಮಾರ್ಗದರ್ಶನ ಹಾಗೂ ಸೂಕ್ತಕ್ರಮಗಳನ್ನು ಜರುಗಿಸತ್ತಿರಬೇಕು. ತಾಲೂಕಿನ ಕ್ಷೇತ್ರಶಿಕ್ಷಣಾಧಿಕಾರಿಗಳು, ಹಾಗೂ ಸಹಾಯಕ ನಿರ್ದೇಶಕರು (ಮ.ಉ.ಯೋ) ಮತ್ತು ಸಿ.ಆರ್.ಪಿರವರು ಈ ಮೇಲಿನ ಎಲ್ಲಾ ಅಂಶಗಳನ್ನು ಸಮನ್ವಯವಾಗಿ ದಿನನಿತ್ಯ ಸಂಪರ್ಕದಲ್ಲಿದ್ದು ಕಾರ್ಯಚಟುವಟಿಕೆ ನಿರ್ವಹಿಸಲು ಸೂಚಿಸಿದೆ.

ಒಟ್ಟಾರೆ ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ಮೇಲಿನ ವಿಷಯಕ್ಕೆ ತಕ್ಷಣ ನಿಮ್ಮ ತಾಲೂಕಿನ ಸ್ಪಷ್ಟಿಕರಣ ನೀಡಲು ತಿಳಿಸಿದೆ.

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತಕ್ರಮಕ್ಕಾಗಿ**

1) ಉಪನಿರ್ದೇಶಕರು, ಸಾ.ಶಿ.ಇಲಾಖೆ, ಬೆಳಗಾವಿ ಮತ್ತು ಚಿಕ್ಕೋಡಿ
2) ಜಿಲ್ಲೆಯ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ, ____________
3) ಜಿಲ್ಲೆಯ ಎಲ್ಲಾ ಸಹಾಯಕ ನಿರ್ದೇಶಕರು (ಮ.ಉ.ಯೋ) ತಾ.ಪಂ ______________

ಕರ್ನಾಟಕ ಸರ್ಕಾರ
GOVERNMENT OF KARNATAKA
ಜಿಲ್ಲಾ ಪಂಚಾಯತ ಕಾರ್ಯಾಲಯ ಬೆಳಗಾವಿ-590 002
ZILLA PANCHAYAT OFFICE, BELGAUM-590 002

ದೂರವಾಣಿ 0831-2407205
Telephone -2407212

ಫ್ಯಾಕ್ಸ್/Fax 0831-2429662
e-mail ceo_zp_bgm@nic.in
eobelmms@yahoo.co.in

ಸಂಖ್ಯೆ:ಜಿಪಂ:ಅದಾ:ಪ್ರ.ಚಿಕಿತ್ಸೆ:2013-14

ದಿನಾಂಕ: 06-02-2014.

ಉಪನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಳಗಾವಿ ಮತ್ತು ಚಿಕ್ಕೋಡಿ

ವಿಷಯ: ಶಾಲೆಗಳಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆಯನ್ನು ಕಡ್ಡಾಯವಾಗಿ ನಿರ್ವಹಿಸುವ ಬಗ್ಗೆ
ಉಲ್ಲೇಖ: 1) ದಿನಾಂಕ: 16-12-2013ರಂದು ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಚಾಲನ ಮತ್ತು ಪರಾಮರ್ಶ ಸಮಿತಿಯ ನಡಾವಳಿಗಳು
2) ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ರವರ ಪತ್ರಸಂಖ್ಯೆ:ಎಂ2/ ಅದಾ/ ರಾಚಾಪ.ಸ.ಸಭೆ/36/13-14 ದಿನಾಂಕ: 28-1-2014

**

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಧ್ಯಾಹ್ನ ಉಪಹಾರ ಯೋಜನೆಯಡಿ ಪ್ರತಿ ದಿನ ಬಿಸಿಊಟ ತಯಾರಿಸಲಾಗುತ್ತಿದ್ದು, ಆಕಸ್ಮಿಕ ಸಂದರ್ಭಗಳಲ್ಲಿ ಮಕ್ಕಳು ಅವಘಡಗಳಿಗೆ ತುತ್ತಾಗುವ ಸಂದರ್ಭಗಳು ಬರುತ್ತವೆ.

ಬಿಸಿ ಅನ್ನ, ಸಾಂಬಾರುಗಳಂತಹ ಪದಾರ್ಥಗಳು ಮಕ್ಕಳ ಚರ್ಮಕ್ಕೆ ತಾಗಿ ಸಣ್ಣಮಟ್ಟ ಅವಘಡಗಳಿಗೆ ಕಾರಣವಾಗಬಹುದು. ಈಗಾಗಲೇ ಕೆಲವು ಶಾಲೆಗಳಲ್ಲಿ ಇಂತಹ ಸಮಸ್ಯಗಳನ್ನು ಕಂಡಿದ್ದೇವೆ. ಇಂತಹ ಸಂದರ್ಭಗಳಲ್ಲಿ ಮಕ್ಕಳಿಗೆ ತುರ್ತ ಚಿಕಿತ್ಸೆಯನ್ನು ಶಾಲಾ ಹಂತದಲ್ಲಿ ನೀಡಲು ಅನುಕೂಲವಾಗುವಂತೆ ಪ್ರಥಮ ಚಿಕಿತ್ಸೆ ಪೆಟ್ಟಿಗೆ ನಿರ್ವಹಿಸಿರುವುದು ಅವಶ್ಯವಾಗಿರುವುದು ಕಂಡುಬಂದಿದೆ.

ಈ ಹಿನ್ನಲೆಯಲ್ಲಿ ಎಲ್ಲಾ ಶಾಲೆಗಳಲ್ಲಿಯೂ ಕಡ್ಡಾಯವಾಗಿ ಪ್ರಥಮ ಚಿಕಿತ್ಸೆ ಪೆಟ್ಟಿಗೆಯನ್ನು ಅಗತ್ಯ ಔಷಧಿ ಸಾಮಗ್ರಿಗಳೊಂದಿಗೆ ಶಾಲೆಗಳಲ್ಲಿ ನಿರ್ವಹಿಸಲು ಸೂಚಸಿದೆ ಇದಕ್ಕೆ ತಗಲುವ ವೆಚ್ಚವನ್ನು ಪ್ರಸ್ತುತ ಶಾಲೆಯಲ್ಲಿರುವ ಶಾಲಾ ಅನುದಾನ/ ನಿರ್ವಹಣಾ ಅನುದಾನ/ ಸಂಚಿತ ಖಾತೆ ಚಾಲ್ತಿ ಖಾತೆಗಳಿಂದ ಪಡೆದು ನಿಯಮಾನುಸಾರ ಖರೀದಿಸಿ ಯಾವುದೇ ವೇಳೆಯಲ್ಲಿ ಅವಘಡಗಳಾದಾಗ ಸಿದ್ಧತೆಯಲ್ಲಿರುವಂತೆ ನಿರ್ವಹಿಸಲು ಈ ಮೂಲಕ ಸೂಚಿಸಿದೆ. ಈ ಬಗ್ಗೆ ನಮ್ಮ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಕ್ರಮಕೈಗೊಂಡು ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಕೋರಿದೆ.

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ಪ್ರತಿಯನ್ನು ಸೂಕ್ತಕ್ರಮಕ್ಕಾಗಿ

1) ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ----------
2) ಜಿಲ್ಲೆಯ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ, ------
3) ಜಿಲ್ಲೆಯ ಎಲ್ಲಾ ಸಹಾಯಕ ನಿರ್ದೇಶಕರು (ಮ.ಉ.ಯೋ) ತಾ.ಪಂ -----------